ಊ) ಈ ಶಾಲೆಗಳಿಗೆ ಕೊಠಡಿ ನಿರ್ಮಾಣಕ್ಕೆ ಎಷ್ಟು ಅನುದಾನ ಒದಗಿಸಲಾಗುತ್ತದೆ?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. :

ಅ) 2002–03ನೇ ಸಾಲಿನಿಂದ ಮಧ್ಯಾಹ್ನ ಉಪಹಾರ ಕಾರ್ಯಕ್ರಮವು ಶೈಕ್ಷಣಿಕವಾಗಿ ಹಿಂದುಳಿದ ಈಶಾನ್ಯ ವಲಯದ 7 ಜಿಲ್ಲೆಗಳಲ್ಲಿ ಪ್ರಾರಂಭ ಮಾಡಲಾಯಿತು. ದಿನಾಂಕ 1–7–2003 ರಿಂದ ಅಕ್ಷರ ದಾಸೋಹ ಎಂಬ ಹೆಸರಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಯಿತು.

ಆ) 1563ರ ಮಕ್ಕಳಿಗೆ ಈ ಸೌಲಭ್ಯ ಕಲ್ಪಿಸಲಾಗಿದೆ.

ಇ) ಬೀರೂರು ಕ್ಷೇತ್ರದಲ್ಲಿ 153 ಅಡುಗೆ ಕೇಂದ್ರಗಳಿದ್ದು, 112 ಅಡುಗೆ ಕೋಣೆಗಳನ್ನು ನಿರ್ಮಿಸಲಾಗಿದೆ. ಉಳಿದ 41 ಅಕೇಂದ್ರಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಬಂದಿದೆ.

ಉ) ಮುಂದಿನ ಎರಡು ವರ್ಷಗಳಲ್ಲಿ ಹಂತ ಹಂತವಾಗಿ ಅಡುಗೆ ಕೋಣೆಗಳ ಸೌಲಭ್ಯ ಕಲ್ಪಿಸಲಾಗುವುದು.

ಊ) ಎ ಮತ್ತು ಬಿ ಮಾದರಿ ಅಡುಗೆ ಕೋಣೆಗಳನ್ನು ನಿರ್ಮಿಸಲು ಪ್ರತಿ ಕೋಣೆಗೆ 50,000–00 ರೂ ನಿಗದಿಪಡಿಸಿದೆ.

ಸಿ ಮಾದರಿ ಕೋಣೆ ನಿರ್ಮಿಸಲು 60,000–00 ರೂ.ಗಳನ್ನು ನಿಗದಿ ಪಡಿಸಿದೆ.

ರಾಜ್ಯದಲ್ಲಿ 2005–06ನೇ ಸಾಲಿಗೆ ರೂ:30.00 ಕೋಟಿಗಳನ್ನು 6000 ಅಡುಗೆ ಕೋಣೆಗಳನ್ನು ನಿರ್ಮಿಸಲು ಬಿಡುಗಡೆ ಮಾಡಿದೆ.

ಉಳಿಕೆ 10812 ಅಡುಗೆ ಕೋಣೆಗಳನ್ನು ನಿರ್ಮಿಸಲು ಬಾಕಿ ಇದ್ದು ಇವುಗಳನ್ನು ನಿರ್ಮಿಸಲು ಕೆಳಕಂಡ ನಿಧಿಗಳಿಂದ ಹಣವನ್ನು ಬಳಸಿಕೊಂಡು ಪೂರೈಸಲು ಸಂಬಂಧಿಸಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ತಿಳಿಸಲಾಗಿದೆ. ಎಸ್.ಜಿ.ಆರ್.ವೈ, ಎಸ್.ಜಿ.ಎಸ್.ಆರ್.ವೈ, ಗ್ರಾಮ ಪಂಚಾಯಿತಿಗೆ ನೀಡಿದ ಮುಕ್ತ ನಿಧಿ, ಗ್ರಾಮ ಪಂಚಾಯಿತಿಯ ಸ್ವಂತ ವರಮಾನ, ಪ್ರಕೃತಿ ವಿಕೋಪ ನಿಧಿ, ಪಂಚಾಯಿತಿ ಕಟ್ಟಡ ನಿಧಿ, ಹಾಸ್ಟೆಲ್ ಮತ್ತು ಶಾಲೆಗಳ ಯೋಜನೆ, 11ನೇ ಹಣಕಾಸು ಆಯೋಗ ಅನುದಾನ, ಬರಪರಿಹಾರದ ಕೂಲಿಗಾಗಿ ಕಾಳು ಯೋಜನೆ, ರಾಷ್ಟ್ರೀಯ ಕೊಳಚೆ ಅಭಿವೃದ್ಧಿ ಕಾರ್ಯಕ್ರಮ, ನಗರ ಕೂಲಿಗಾಗಿ ಕೆಲಸ ಕಾರ್ಯಕ್ರಮ.

5007 (5988) ಶ್ರೀ ಧರ್ಮೇಗೌಡ ಎಸ್. ಎಲ್. (ಬೀರೂರು) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ವಯಸ್ಕರ ಶಿಕ್ಷಣ ಯೋಜನೆ ಅಡಿಯಲ್ಲಿ ಪ್ರಾರಂಭಿಸಿರುವ ಗ್ರಾಮ ಸರ್ಕಾರತಾ ಸಮಿತಿಗಳು ಬೀರೂರು ಕ್ಷೇತ್ರದಲ್ಲಿ ಎಷ್ಟಿವೆ;

ಆ) ಅವುಗಳು ಸರಿಯಾಗಿ ಕರ್ತವ್ಯ ನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸಮರ್ಪಕ ಕಾರ್ಯನಿರ್ವಹಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಈ) ಬಂದಿಲ್ಲದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗುವುದು;

ಉ) ಈ ಸಮಿತಿಗಳಲ್ಲಿ ಚುನಾಯಿತ ಪ್ರತಿನಿಧಿಗಳನ್ನು ನಿರ್ಲಕ್ಷಿಸುತ್ತಿರುವುದಕ್ಕೆ ಕಾರಣವೇನು;

ಊ) ಗ್ರಾಮ ಸಾಕ್ಷರತಾ ಸಮಿತಿಗಳು ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ;

ಖ) ಈ ಕಾರ್ಯಕ್ರಮಗಳನ್ನು ನಡೆಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. :

ಅ) ಬೀರೂರು ವಿಧಾನಸಭಾ ಕ್ಷೇತ್ರದಲ್ಲಿ 61 ಗ್ರಾಮ ಸಾಕ್ಷರತಾ ಸಮಿತಿಗಳನ್ನು ಆರಂಭಿಸಲಾಗಿದೆ;)

ಆ) ಹೌದು

ಇ) ಗ್ರಾಮ ಸಾಕ್ಷರತಾ ಸಮಿತಿಗಳನ್ನು ಪುನಶ್ಚೇತನಗೊಳಿಸಲು ತಾಲ್ಲೂಕು ಮಟ್ಟದ ಸಾಕ್ಷರತಾ ಸಮಿತಿಯ ಅಧಿಕಾರಿಗಳಿಗೆ ಅವರುಗಳ ಗ್ರಾಮಗಳಿಗೆ ಭೇಟಿ ನೀಡಿದ ಕಾಲದಲ್ಲಿ ಗ್ರಾಮ ಸಾಕ್ಷರತಾ ಸಮಿತಿಯ ಅಧ್ಯಕ್ಷ/ಕಾರ್ಯದರ್ಶಿಯವರನ್ನು ಕಂಡು ಸಾಕ್ಷರತಾ ಕಾರ್ಯಕ್ರಮದ ಮನವಿಮಾಡಿ ಅದರಲ್ಲಿ ಸಕ್ರೀಯವಾಗಿ ತೊಡಗಿಸುವ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಈ ಸಮಿತಿಯಲ್ಲಿ ಚುನಾಯಿತಿ ಪ್ರತಿನಿಧಿಗಳನ್ನು ನಿರ್ಲಕ್ಷಿಸುತ್ತಿಲ್ಲ. ಗ್ರಾಮದ ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಇವರೆಲ್ಲರನ್ನು ಸಕ್ರೀಯವಾಗಿ ತೊಡಗಿಸಿಕೊಂಡು ಹೋಗಲಾಗುತ್ತಿದೆ.

ಊ) ಗ್ರಾಮ ಸಾಕ್ಷರತಾ ಸಮಿತಿಗಳು ಮುಂದುವರಿಕೆ ಶಿಕ್ಷಣ ಕಾರ್ಯಕ್ರಮದ ಯಶಸ್ಸಿಗೆ ಈ ಕೆಳಕಾಣಿಸಿದ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ಕಲಿಕಾ ಕೇಂದ್ರ 2. ವಾಚನಾಲಯ 3. ಗ್ರಂಥಾಲಯ 4. ಚರ್ಚಾಮಂಡಲ 5. ಮಾಹಿತಿ ಕೇಂದ್ರ. 6. ಅಭಿವೃದ್ಧಿ ಕೇಂದ್ರ 7. ತರಬೇತಿ ಕೇಂದ್ರ 8. ಸಾಂಸ್ಕೃತಿಕ ಕೇಂದ್ರ 9. ಆಟೋಟ ಕೇಂದ್ರ 10. ಸಮುದಾಯ ಕೇಂದ್ರ.

ಋ) ಸ್ಥಾಪನೆಯಾದ ಬಹುಪಾಲಿನ ಗ್ರಾಮ ಸಾಕ್ಷರತಾ ಸಮಿತಿಗಳು ಈ ಕಾರ್ಯಕ್ರಮ ನಡೆಸುತ್ತಿವೆ. ಕಾರ್ಯಕ್ರಮ ನಡೆಸದ ಸಮಿತಿಯ ತಾತ್ಕಾಲಿಕವಾಗಿ ಅನುದಾನ ತಡೆಹಿಡಿದು ಪ್ರಗತಿ ಪರಿಶೀಲಿಸಿದ ನಂತರ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

5008 (6002) ಶ್ರೀ ಈಶ್ವರಪ್ಪ ಕೆ. ಎಸ್. (ಶಿವಮೊಗ್ಗ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಕರ್ನಾಟಕ ಭೂ ಸೇನಾ ನಿಗಮವು ಬಿಡುಗಡೆಯಾದ ಅನುದಾನಕ್ಕಿಂತ ಹೆಚ್ಚು ವೆಚ್ಚ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯೋಜನಾವಾರು ವಿವರ ನೀಡುವುದು;

ಇ) ಹೆಚ್ಚುವರಿ ಖರ್ಚು ಮಾಡಿದ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮವೇನು; (ಅಂತಹ ಅಧಿಕಾರಿಗಳ ವಿವರ ನೀಡುವುದು)'

ಈ) ಹೆಚ್ಚುವರಿಯಾಗಿ ಖರ್ಚು ಮಾಡಿದ ಹಣವನ್ನು ಮನ್ನಾಮಾಡಿರುವ ಬಗ್ಗೆ ವಿವರ ನೀಡುವುದು?

ಡಾ: ಹೆಚ್.ಸಿ. ಮಹದೇವಪ್ಪ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.